# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 84 |
| ಸದಸ್ಯರ ಹೆಸರು | ಶ್ರೀ ಅರವಿಂದ ಕುಮಾರ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 07–12–2020 |
| ಉತ್ತರಿಸಬೇಕಾದ ಸಚಿವರು | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು |

<table>
<tr><th>ಪ್ರಶ್ನೆ</th><th>ಉತ್ತರ</th></tr>
<tr><td>ಅ) ಬೀದರ್ ಜಿಲ್ಲೆಯಲ್ಲಿ ಸುಮಾರು (ಖಾಸಗಿ) ಶಾಲೆಗಳು ಮೂಲಭೂತ ಸೌಕರ್ಯಗಳಿಲ್ಲದೆ ನಡೆಯುತ್ತಿದ್ದು, ಅವುಗಳಲ್ಲಿ ಸರ್ಕಾರದಿಂದ ಪರವಾನಿಗೆ ಪಡೆದಿರುವ ಶಾಲೆಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)</td><td>ಬೀದರ್ ಜಿಲ್ಲೆಯಲ್ಲಿ ಸರ್ಕಾರದಿಂದ ಪರವಾನಿಗೆ ಪಡೆದಿರುವ ಖಾಸಗಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳು;
<table>
<tr><th>ಪ್ರಾಥಮಿಕ ಶಾಲೆಗಳು</th><th>ಪ್ರೌಢ ಶಾಲೆಗಳು</th></tr>
<tr><td>590</td><td>216</td></tr>
</table>
ಅವುಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿರುವ ಶಾಲೆಗಳ ಸಂಖ್ಯೆ :
<table>
<tr><th>ಪ್ರಾಥಮಿಕ ಶಾಲೆಗಳು</th><th>ಪ್ರೌಢ ಶಾಲೆಗಳು</th></tr>
<tr><td>105</td><td>22</td></tr>
</table>
ಕೊರತೆಯಿರುವ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.</td></tr>
<tr><td>ಆ) ಮೂಲಭೂತ ಸೌಕರ್ಯಗಳಿಲ್ಲದಂತಹ ಶಾಲೆಗಳ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;</td><td>ಖಾಸಗಿ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಣ ಸಂಸ್ಥೆಗಳಿಗೆ ಸಂಯೋಜನೆ ಅಥವಾ ಮಾನ್ಯತೆ ನೀಡುವ ಬಗ್ಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿ (ಸಿವಿಲ್) ಸಂಖ್ಯೆ:483/2004, ದಿನಾಂಕ :13–04–2009ರ ತೀರ್ಪಿನಂತೆ ಸರ್ಕಾರವು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಹೊಸ ಖಾಸಗಿ ಪ್ರಾಥಮಿಕ ಶಾಲೆಗಳನ್ನು ಮಂಜೂರು ಮಾಡುವ ಆದೇಶದಲ್ಲಿ ವಿಧಿಸುತ್ತಿರುವ ಒಂದು ವರ್ಷದೊಳಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಳ್ಳುವುದಾಗಿ ಸಂಬಂಧಪಟ್ಟ ಸಂಸ್ಥೆಯಿಂದ ಮುಚ್ಚಳಿಕೆ ಪತ್ರ ಪಡೆದು ಅನುಮತಿ ನೀಡತಕ್ಕದ್ದು'' ಎಂಬ ಷರತ್ತು ಇನ್ನು ಮುಂದೆ ಕೈಬಿಡುವಂತೆ ಮತ್ತು ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಕಟ್ಟಡದಲ್ಲಿ ಎಲ್ಲಾ ಸುರಕ್ಷತಾ ಕ್ರಮಗಳನ್ನು ಅಳವಡಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಂಡೇ ಮಾನ್ಯತೆ ನೀಡತಕ್ಕದ್ದು ಎಂಬ ಷರತ್ತನ್ನು ವಿಧಿಸಿ ಸರ್ಕಾರದ ಆದೇಶ ಸಂಖ್ಯೆ : ಇಡಿ 587 ಪಿಜಿಸಿ 2018, ದಿನಾಂಕ :19–11–2018ರಲ್ಲಿ ಆದೇಶವನ್ನು ಹೊರಡಿಸಲಾಗಿದೆ.<br>
ರಾಜ್ಯದಲ್ಲಿನ ಖಾಸಗಿ ಅನುದಾನಿತ/ಅನುದಾನರಹಿತ ಪ್ರಾಥಮಿಕ, ಪ್ರೌಢ ಮತು ಪದವಿ ಪೂರ್ವ ಕಾಲೇಜುಗಳಲ್ಲಿ ಹೊಸ ಭಾಷೆ, ಸಂಯೋಜನೆ ಹಾಗೂ ಹೆಚ್ಚುವರಿ</td></tr>
</table>

| | |
|---|---|
| | ವಿಭಾಗಗಳನ್ನು ಅನುಮತಿಸುವ ಸಂದರ್ಭದಲ್ಲಿ ಕಟ್ಟಡ ಸುರಕ್ಷತಾ ಪ್ರಮಾಣ ಪತ್ರದ ಅಗತ್ಯತೆಯ ಕುರಿತಂತೆ ಸರ್ಕಾರದ ಸುತ್ತೋಲೆ ಸಂಖ್ಯೆ : ಇಪಿ 46 ಎಸ್.ಹೆಚ್.ಹೆಚ್ 2020 ದಿನಾಂಕ :10–11–2020ರಲ್ಲಿ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ. (ಪ್ರತಿ ಅನುಬಂಧದಲ್ಲಿರಿಸಿದೆ)<br>ಅದರಂತೆ, ಮೂಲಭೂತ ಸೌಕರ್ಯಗಳ ಕೊರತೆಯಿರುವ ಶಾಲೆಗಳಿಗೆ ಆಯಾ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮೂಲಭೂತ ಸೌಕರ್ಯಗಳನ್ನು ಅಳವಡಿಸಿಕೊಳ್ಳಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಮೂಲಕ ಸುತ್ತೋಲೆಯನ್ನು ಹೊರಡಿಸಲಾಗಿದೆ. |
| **ಇ)** ಪರವಾನಿಗೆ ಇಲ್ಲದೆ ಹೆಚ್ಚುವರಿ ತರಗತಿಗಳನ್ನು ನಡೆಸುತ್ತಿರುವ ಸಂಸ್ಥೆಗಳಿಗೆ ಆರ್.ಟಿ.ಇ ವಿದ್ಯಾರ್ಥಿಗಳ ಶಾಲಾ ಶುಲ್ಕ ಸಂದಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅಂತಹ ಪ್ರಕರಣಗಳೆಷ್ಟು; ಆರ್.ಟಿ.ಇ ಶುಲ್ಕ ನೀಡಿದ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ ? | ಆರ್.ಟಿ.ಇ ಮಕ್ಕಳ ಶುಲ್ಕ ಪಾವತಿ ಸಂಬಂಧ ವಾಸ್ತವಾಂಶವನ್ನು ಮರೆಮಾಚಿ ಅತ್ಯಧಿಕ ಮೊತ್ತದ ಹಣ ದುರುಪಯೋಗಪಡಿಸಿಕೊಂಡಿರುವುದರಿಂದ ಶ್ರೀ ಕೆ.ಪ್ರಕಾಶ್, ಕ್ಷೇತ್ರ ಶಿಕ್ಷಣಾಧಿಕಾರಿಗಳು, (ಸ್ಥಾನಪನ್ನ ಮುಂಬಡ್ತಿ ಹೊಂದಿರುವುದಿಲ್ಲ) ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ಪ್ರಾರಂಭಿಸಲಾಗಿದೆ. |

**ಇಡಿ 153 ಪಿಎಂಸಿ 2020**

[ ಎಸ್.ಸುರೇಶ್ ಕುಮಾರ್]
**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ**
**ಸಕಾಲ ಸಚಿವರು.**

**ಕರ್ನಾಟಕ ಸರ್ಕಾರ**

ಸಂಖ್ಯೆ:ಇಪಿ 46 ಎಸ್‌ಹೆಚ್‌ಹೆಚ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:10-11-2020.

**ಸುತ್ತೋಲೆ**

ವಿಷಯ:- ರಾಜ್ಯದಲ್ಲಿನ ಖಾಸಗಿ ಅನುದಾನಿತ/ಅನುದಾನರಹಿತ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಹೊಸ ಭಾಷೆ, ಸಂಯೋಜನೆ ಹಾಗೂ ಹೆಚ್ಚುವರಿ ವಿಭಾಗಗಳನ್ನು ಅನುಮತಿಸುವ ಸಂದರ್ಭದಲ್ಲಿ ಕಟ್ಟಡ ಸುರಕ್ಷತಾ ಪ್ರಮಾಣ ಪತ್ರದ ಅಗತ್ಯತೆಯ ಕುರಿತು.

ಉಲ್ಲೇಖ:- 1) ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರ ಪತ್ರ ಸಂಖ್ಯೆ:ಪಪೂಶಿ/ಸಿಬ್ಬಂದಿ-3/ಪಾಲಿಸಿ/ಹೊ.ಸಂ.ಕು./ಹೆ.ವಿ.ಕು./2020-21 ದಿನಾಂಕ:14-08-2020.

2) ದಿನಾಂಕ:19-09-2020ರಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ನಡವಳಿ.

* * *

ಖಾಸಗಿ ಅನುದಾನಿತ/ಅನುದಾನರಹಿತ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಅನುಮತಿ/ಮಂಜೂರಾತಿ ನೀಡುವಲ್ಲಿ ಹಾಗೂ ಹಳೆಯ ಪದವಿ ಪೂರ್ವ ಕಾಲೇಜು ಕಟ್ಟಡಗಳಲ್ಲಿ ನ್ಯಾಷನಲ್ ಬಿಲ್ಡಿಂಗ್ ಕೋಡ್ ಆಫ್ ಇಂಡಿಯಾ ನಿಯಮಾವಳಿಗಳನ್ವಯ ಸುರಕ್ಷತಾ ಮಾನದಂಡಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ಕಟ್ಟಡ ಸುರಕ್ಷತಾ ಪ್ರಮಾಣ ಪತ್ರ/ಕ್ಲಿಯರೆನ್ಸ್ ಸರ್ಟಿಫಿಕೇಟನ್ನು ನೀಡುವ ಕುರಿತಂತೆ ಲೋಕೋಪಯೋಗಿ ಇಲಾಖೆ ಮತ್ತು ಅಗ್ನಿನಂದಕ ಉಪಕರಣಗಳನ್ನು ಅಳವಡಿಸಿರುವ ಬಗ್ಗೆ ಕರ್ನಾಟಕ ಅಗ್ನಿ ಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಗಳಿಂದ ನಿರ್ಧಿಷ್ಟ ಸಕ್ಷಮ ಪ್ರಾಧಿಕಾರಗಳು ಪ್ರಮಾಣ ಪತ್ರ ನೀಡುವ ಸಂಬಂಧದಲ್ಲಿ ಸೂಕ್ತ ಮಾರ್ಗದರ್ಶನ ನೀಡುವಂತೆ ಉಲ್ಲೇಖ (1)ರಲ್ಲಿ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರು ಕೋರಿರುತ್ತಾರೆ.

ಉಲ್ಲೇಖ(2)ರ ದಿನಾಂಕ:19-09-2020ರಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಅಗ್ನಿಶಾಮಕ ಇಲಾಖೆ, ಲೋಕೋಪಯೋಗಿ ಇಲಾಖೆ ಹಾಗೂ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆಯ ಅಧಿಕಾರಿಗಳನ್ನೊಳಗೊಂಡಂತೆ ಸಭೆ ನಡೆಸಿ, ಈ ಬಗ್ಗೆ ನಿರ್ಣಯ ತೆಗೆದುಕೊಳ್ಳಲಾಗಿದೆ.

ರಾಜ್ಯದ ಖಾಸಗಿ ಅನುದಾನಿತ/ಅನುದಾನ ರಹಿತ ಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ಹೊಸ ಭಾಷೆ/ಸಂಯೋಜನೆ ಹಾಗೂ ಹೆಚ್ಚುವರಿ ವಿಭಾಗಗಳನ್ನು ಅನುಮತಿಸುವ ಸಂದರ್ಭದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ರಿಟ್ ಅರ್ಜಿ (ಸಿವಿಲ್) ಸಂಖ್ಯೆ 483/2004ರ ಪ್ರಕರಣದಲ್ಲಿ ದಿನಾಂಕ:13-04-2009ರಂದು ನೀಡಿರುವ ತೀರ್ಪಿನನ್ವಯ ಕಟ್ಟಡ ಸುರಕ್ಷತೆ ಮಾನದಂಡಗಳನ್ನು ಅಳವಡಿಸಿಕೊಳ್ಳಲು ಕಟ್ಟಡ ಸುರಕ್ಷತಾ ಪ್ರಮಾಣ ಪತ್ರಗಳ ಅಗತ್ಯತೆಯ ಕುರಿತಂತೆ ಹಾಗೂ ಹೊಸ ಖಾಸಗಿ ಶಾಲೆಗಳಿಗೆ ಹಾಗೂ ಪದವಿ ಪೂರ್ವ ಕಾಲೇಜುಗಳಿಗೆ ಮಂಜೂರಾತಿ ನೀಡುವಾಗ ಮತ್ತು ಈಗಾಗಲೇ ಅಸ್ತಿತ್ವದಲ್ಲಿರುವ ಶಾಲಾ ಕಾಲೇಜುಗಳ ಮಾನ್ಯತೆಯನ್ನು ನವೀಕರಿಸುವ ಮತ್ತು ಹೊಸ ಸಂಯೋಜನೆ/ವಿಭಾಗಗಳನ್ನು ಮಂಜೂರು ಮಾಡುವಾಗ ಶಾಲಾ ಕಾಲೇಜುಗಳ ಕಟ್ಟಡ ಸುರಕ್ಷತೆಯ ಪ್ರಮಾಣ ಪತ್ರವನ್ನು National Building Code ಅನ್ವಯ ಆಯಾ ಸಂಸ್ಥೆಗಳು ಸಲ್ಲಿಸಬೇಕಾಗಿರುವುದು

ಕಡ್ಡಾಯವಾಗಿರುತ್ತದೆ. ರಾಜ್ಯಾದ್ಯಂತ ಸದರಿ ಪ್ರಮಾಣ ಪತ್ರವನ್ನು ನೀಡುವ ಸಕ್ಷಮ ಪ್ರಾಧಿಕಾರ ಯಾರು ಮತ್ತು ಈ ಪ್ರಮಾಣ ಪತ್ರದ ನೀಡಿಕೆಯಲ್ಲಿ ಏಕರೂಪತೆ ಇಲ್ಲದಿರುವುದು ಕಂಡು ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ಶಾಲಾ ಕಾಲೇಜುಗಳಿಗೆ ಸಂಬಂಧಿಸಿದಂತೆ ಸಂದರ್ಭಾನುಸಾರ ಅಸ್ತಿತ್ವದಲ್ಲಿರುವ ಹಳೆಯ ಕಟ್ಟಡ ಮತ್ತು ಹೊಸ ಕಟ್ಟಡಗಳ ಸುರಕ್ಷತೆಯ ಬಗ್ಗೆ National Building Code ಅನ್ವಯ ಪ್ರಮಾಣೀಕರಿಸಲು ರಾಜ್ಯಾದ್ಯಂತ ಸೂಕ್ತ ಪ್ರಾಧಿಕಾರಗಳನ್ನು ನಿಗಧಿಪಡಿಸಿ ಏಕರೂಪದ ಪ್ರಮಾಣ ಪತ್ರವನ್ನು ಸಂಸ್ಥೆಗಳಿಗೆ ನೀಡುವಲ್ಲಿ ಅಗ್ನಿಶಾಮಕ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದಂತೆ ಈ ಕೆಳಕಂಡ ಮಾರ್ಗಸೂಚಿಗಳನ್ನು ಪಾಲಿಸುವುದು.

ರಾಜ್ಯದ ಖಾಸಗಿ ಅನುದಾನಿತ ಹಾಗೂ ಅನುದಾನ ರಹಿತ ಶಾಲಾ ಕಾಲೇಜುಗಳಿಗೆ ಸಂಬಂಧಿಸಿದಂತೆ ಅಗ್ನಿಶಾಮಕ ಇಲಾಖೆಯಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯುವ ಕುರಿತು ಈ ಕೆಳಕಂಡ ಸೂಚನೆಗಳನ್ನು ತಪ್ಪದೇ ಪಾಲಿಸುವುದು.

1. ಪೊಲೀಸ್ ಮಹಾ ನಿರ್ದೇಶಕರು ಹಾಗೂ ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು ಇವರು ರಾಜ್ಯದಲ್ಲಿರುವ ಶೈಕ್ಷಣಿಕ ಕಟ್ಟಡಗಳನ್ನು ಏಕರೂಪದಲ್ಲಿ ಪರಿವೀಕ್ಷಣೆ ಮಾಡುವ ಬಗ್ಗೆ ಮಾರ್ಗಸೂಚಿಯ ಸುತ್ತೋಲೆಯನ್ನು ದಿನಾಂಕ:08-07-2020 ರಂದು ಹೊರಡಿಸಿರುವ ಸುತ್ತೋಲೆಯನ್ನು ಪಾಲಿಸುವುದು.

2. ಹೊಸ ಖಾಸಗಿ ಶಾಲಾ ಕಾಲೇಜುಗಳನ್ನು ಪ್ರಾರಂಭಿಸುವ ಪೂರ್ವದಲ್ಲಿ ಸಂಬಂಧಿಸಿದ ಶಿಕ್ಷಣ ಸಂಸ್ಥೆಯು ಸಕ್ಷಮ ಪ್ರಾಧಿಕಾರವಾದ ಅಗ್ನಿಶಾಮಕ ಇಲಾಖೆಯನ್ನು ಸಂಪರ್ಕಿಸಿ ಖಾಲಿ ನಿವೇಶನದ ಅನುಮೋದಿತ ನೀಲಿ ನಕಾಶೆಗೆ ಹಾಗೂ ಉದ್ದೇಶಿತ ಕಟ್ಟಡದ ನಿರ್ಮಾಣದ ಪ್ರತಿಯೊಂದು (ತಳಪಾಯ, ನೆಲಮಹಡಿ, ಲಿಂಟಲ್, ರೂಫ್...ಇತ್ಯಾದಿ) ಹಂತದಲ್ಲೂ ನಿರಾಕ್ಷೇಪಣಾ ಪತ್ರವನ್ನು ಪಡೆಯತಕ್ಕದ್ದು ಹಾಗೂ ಅಗ್ನಿನಂದಕ ನಕಾಶೆ (Fire drawing / sketch) ಪಡೆಯತಕ್ಕದ್ದು.

3. ಉದ್ದೇಶಿತ ನಿರ್ಮಿತ ಕಟ್ಟಡದ ಮುಂಭಾಗವು ರಸ್ತೆಯಿಂದ 1/3 ಭಾಗದಷ್ಟು ನಿವೇಶನವು ಖಾಲಿ ಇರತಕ್ಕದ್ದು ಹಾಗೂ ಕಟ್ಟಡದ ಮುಂಭಾಗದ ರಸ್ತೆ 12 ಮೀಟರ್ ಅಗಲವಿರಬೇಕು ಮತ್ತು 8 ರಿಂದ 09 ಮೀಟರ್ ತಿರುವು ಸುತ್ತಳತೆ (turning radius) ಹೊಂದಿರತಕ್ಕದ್ದು. ಒಂದು ವೇಳೆ ಕಟ್ಟಡವು ಏರಿಯಲ್ ಪ್ಲಾಟ್‌ಫಾರ್ಮ್ ಹೊಂದಿದ್ದಲ್ಲಿ ಸುತ್ತಳತೆಯು ಕನಿಷ್ಠ 08 ರಿಂದ 09 ಚದರ ಮೀಟರ್ ಇರತಕ್ಕದ್ದು.

4. ಉದ್ದೇಶಿತ ನಿರ್ಮಿತ ಕಟ್ಟಡದ ಛಾವಣಿಯಲ್ಲಿ ಕನಿಷ್ಠ 10,000 ಲೀಟರ್ ಸಾಮರ್ಥ್ಯವಿರುವ ನೀರಿನ ತೊಟ್ಟಿ (Over head tank with high capacity pump)ಯನ್ನು ಹೊಂದಿರತಕ್ಕದ್ದು.

5 ಉದ್ದೇಶಿತ ನಿರ್ಮಿತ ಕಟ್ಟಡವು ಎನ್.ಓ.ಸಿಯನ್ನು ಪಡೆದ ನಂತರ ಪ್ರತಿ 05 ವರ್ಷಕ್ಕೊಮ್ಮೆ ಸಮಾಪನಾ ಪತ್ರವನ್ನು ಅಗ್ನಿಶಾಮಕ ಇಲಾಖೆಯಿಂದ ನವೀಕರಿಸಿಕೊಳ್ಳತಕ್ಕದ್ದು.

6. ಹಳೆಯ ಕಟ್ಟಡದಲ್ಲಿ ನಡೆಸಲ್ಪಡುತ್ತಿರುವ ಶಾಲಾ ಕಾಲೇಜುಗಳ ಶಿಕ್ಷಣ ಸಂಸ್ಥೆಗಳು ಅಗ್ನಿಶಾಮಕ ಇಲಾಖೆಯಿಂದ ನಿಗದಿತ ಶುಲ್ಕವನ್ನು ಪಾವತಿಸಿ ಸಲಹಾಪತ್ರ (Advisory Certificate) ಪಡೆಯತಕ್ಕದ್ದು ಹಾಗೂ ಸಮಾಪನಾ ಪತ್ರವನ್ನು (Compliance

Certificate) ಪಡೆಯತಕ್ಕದ್ದು. ಹಳೆಯ ಕಟ್ಟಡಕ್ಕೆ ಈಗಾಗಲೆ ಅಗ್ನಿಶಾಮಕ ಇಲಾಖೆಯಿಂದ ಶಿಫಾರಸ್ಸು ಪತ್ರ ಪಡೆದು ನಿಗಧಿತ ಅವಧಿಯೊಳಗೆ ಸಮಾಪನಾ ಪತ್ರವನ್ನು (Compliance Certificate) ಸಲ್ಲಿಸತಕ್ಕದ್ದು.

7. ಹಳೆಯ ಕಟ್ಟಡದಲ್ಲಿ ನಡೆಸಲ್ಪಡುತ್ತಿರುವ ಶಾಲಾ ಕಾಲೇಜುಗಳ ಶಿಕ್ಷಣ ಸಂಸ್ಥೆಗಳು ಅಗ್ನಿಶಾಮಕ ಇಲಾಖೆಯಿಂದ ಪಡೆದಿರುವಂತಹ ಸಲಹಾಪತ್ರ (Advisory Certificate)ವನ್ನು ಮತ್ತು ಸಮಾಪನಾ ಪತ್ರವನ್ನು (Compliance Certificate) ಪ್ರತಿ 02 ವರ್ಷಗಳಿಗೊಮ್ಮೆ ನವೀಕರಿಸಿಕೊಳ್ಳತಕ್ಕದ್ದು.

8. ಶಾಲಾ ಕಾಲೇಜುಗಳಲ್ಲಿ ಅಳವಡಿಸಿಕೊಂಡಿರುವ ಅಗ್ನಿನಂದಕಾ ಉಪಕರಣಗಳು ಪ್ರತಿ 03 ತಿಂಗಳಿಗೊಮ್ಮೆ ಸುಸ್ಥಿಯಲ್ಲಿರುವುದನ್ನು ಖಚಿತಪಡಿಸಿಕೊಳ್ಳುವುದು. ಅಗ್ನಿನಂದಕಾ ಉಪಕರಣಗಳು ಸುಸ್ಥಿತಿಯಲ್ಲಿರುವ ಬಗ್ಗೆ ಪ್ರತಿ ವರ್ಷ ಅಗ್ನಿಶಾಮಕ ಇಲಾಖೆಯಿಂದ ಪ್ರಮಾಣ ಪತ್ರ ಪಡೆಯತಕ್ಕದ್ದು.

9. ಮುಂದಿನ ಶೈಕ್ಷಣಿಕ ಸಾಲಿನಿಂದ ಹಳೆ ಕಟ್ಟಡಗಳು, ಲೋರೈಸ್, ಹೈರೈಸ್ ಎರಡೂ ವಿಧವಾದ ಕಟ್ಟಡಗಳನ್ನು ಒಳಗೊಂಡಂತೆ ಕಟ್ಟಡಗಳಲ್ಲಿ 100 ಮೀಟರ್‌ಗಳಿಗೆ ಒಂದರಂತೆ ಅಗ್ನಿನಂದಕಾ ಉಪಕರಣಗಳನ್ನು ಕಡ್ಡಾಯವಾಗಿ ಅಳವಡಿಸತಕ್ಕದ್ದು.

10. ಅಗ್ನಿಶಾಮಕ ಇಲಾಖೆಯು ಅಗ್ನಿನಂದಕಾ / ಸಮಾಪನಾ ಪತ್ರ / ಸಲಹಾ ಪತ್ರಕ್ಕೆ ಎನ್.ಓ.ಸಿ ಪ್ರಮಾಣ ಪತ್ರ ನೀಡುವ ಕುರಿತಂತೆ ಕಾಲಕಾಲಕ್ಕೆ ಪರಿಶೀಲನೆ ನಡೆಸಿ ಹೊರಡಿಸುವ ಸುತ್ತೋಲೆಗಳನ್ನು ಪಾಲಿಸುವುದು.

11. ಕೋವಿಡ್–19 ವ್ಯಾಪಕವಾಗಿ ಹರಡಿರುವುದರಿಂದ ಉಂಟಾಗಿರುವ ಗೊಂದಲಮಯ ವಾತಾವರಣದ ಹಿನ್ನೆಲೆಯಲ್ಲಿ 2020–21ನೇ ಶೈಕ್ಷಣಿಕ ಸಾಲಿಗೆ ಮಾತ್ರ ಮಿತಿಗೊಳಿಸಿ ಸರ್ಕಾರದ ಅನುಮತಿ/ಅಂಗೀಕಾರದ ಆಧಾರದಲ್ಲಿ ನಡೆಯುತ್ತಿರುವ ಯಾವುದೇ ಶಿಕ್ಷಣ ಸಂಸ್ಥೆಗೆ ಹೆಚ್ಚುವರಿ ವಿಭಾಗ/ನಿಯೋಜನೆಗೆ ಅಗ್ನಿಶಾಮಕ ಇಲಾಖೆಯ ದೃಢೀಕರಣದ ನಿರೀಕ್ಷೆಯಲ್ಲಿ ಅನುಮತಿಯನ್ನು ನೀಡುವುದು. ಈ ಸಂದರ್ಭದಲ್ಲಿ ಕಳೆದ ಸಾಲಿನ ಪ್ರಮಾಣ ಪತ್ರವನ್ನು ಪರಿಗಣಿಸುವುದು ಹಾಗೂ ಅನುಮತಿ ಪಡೆದ 3 ತಿಂಗಳ ಅವಧಿಯ ಒಳಗೆ ಸಕ್ಷಮ ಪ್ರಾಧಿಕಾರಗಳ ವತಿಯಿಂದ ಎಲ್ಲಾ ಅವಶ್ಯಕ ದೃಢೀಕರಣಗಳನ್ನು ಸಲ್ಲಿಸಬೇಕೆಂಬ ಷರತ್ತನ್ನು ವಿಧಿಸುವುದು, ಸಲ್ಲಿಸದಿದ್ದಲ್ಲಿ ಅನುಮತಿಯನ್ನು ರದ್ದುಪಡಿಸುವುದು.

ಮುಂದುವರೆದು, ರಾಜ್ಯದ ಖಾಸಗಿ ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ ಲೋಕೋಪಯೋಗಿ ಇಲಾಖೆಯಿಂದ National Building Code ಪ್ರಮಾಣ ಪತ್ರವನ್ನು ಪಡೆಯಬೇಕಾದ್ದಲ್ಲಿ ಉದ್ದೇಶಿತ ಶಾಲಾ ಕಾಲೇಜುಗಳ ಶಿಕ್ಷಣ ಸಂಸ್ಥೆಯು ಜಿಲ್ಲಾ/ತಾಲ್ಲೂಕು ಮಟ್ಟದಲ್ಲಿರುವ ಲೋಕೋಪಯೋಗಿ ಇಲಾಖೆಯ ನಿರ್ಮಾಣ ಘಟಕದ ಕಾರ್ಯಪಾಲಕ ಇಂಜಿನಿಯರ್‌ರವರನ್ನು ಸಂಪರ್ಕಿಸಿ, ನಿಗದಿತ ಶುಲ್ಕ ಪಾವತಿಸಿ, ಖಾಲಿ ನಿವೇಶನದ ಅನುಮೋದಿತ ನೀಲಿ ನಕಾಶೆಗೆ ಹಾಗೂ ಉದ್ದೇಶಿತ ಕಟ್ಟಡದ ನಿರ್ಮಾಣದ ಪ್ರತಿಯೊಂದು ಹಂತದಲ್ಲೂ ನಿರಾಕ್ಷೇಪಣಾ ಮತ್ತು National Building Code ಪ್ರಮಾಣ ಪತ್ರವನ್ನು ಪಡೆಯುವ ಕುರಿತು ಈ ಕೆಳಕಂಡ ಸೂಚನೆಗಳನ್ನು ತಪ್ಪದೇ ಪಾಲಿಸುವುದು.

1. ಖಾಲಿ ನಿವೇಶನದ ಅನುಮೋದಿತ ನೀಲಿ ನಕ್ಷೆಯಲ್ಲಿ ಅಳವಡಿಸಿರುವ ಅಂಶಗಳನ್ನು ಪರಿಶೀಲಿಸಿಕೊಳ್ಳತಕ್ಕದ್ದು.

2. ಕಟ್ಟಡ ನಿರ್ಮಾಣದ ಪ್ರತಿಯೊಂದು ಹಂತವಾದ ತಳಪಾಯ, Basement, Sill level, ಲಿಂಟಲ್ ಲೆವೆಲ್ ಮತ್ತು ರೂಫ್‌ಗಳ ವಿನ್ಯಾಸ ಮತ್ತು ನಿರ್ಮಾಣ ಇತ್ಯಾದಿ ಅಂಶಗಳ ಕುರಿತು ನಿರಾಕ್ಷೇಪಣಾ ಪತ್ರ(NOC) ಯನ್ನು ನಿರ್ಮಾಣ ಘಟಕದ ಕಾರ್ಯಪಾಲಕ ಇಂಜಿನಿಯರ್‌ರವರಿಂದ ಪಡೆಯತಕ್ಕದ್ದು.

3. ನಿರ್ಮಾಣ ಉದ್ದೇಶಿತ ಕಟ್ಟಡದ ಮುಂಭಾಗವು ರಸ್ತೆಯಿಂದ ನಿಗಧಿತ ಭಾಗದಷ್ಟು ನಿವೇಶನವು ಖಾಲಿ ಇರುವುದರ ಬಗ್ಗೆ ದೃಢೀಕರಿಸಿಕೊಳ್ಳತಕ್ಕದ್ದು.

4. ನಿರ್ಮಿತ ಕಟ್ಟಡವು ಸ್ಥಿರ/ಸುಭದ್ರವಾಗಿರುವ ಬಗ್ಗೆ ಲೋಕೋಪಯೋಗಿ ಇಲಾಖೆಯ ನಿರ್ಮಾಣ ಘಟಕದ ಕಾರ್ಯಪಾಲಕ ಇಂಜಿನಿಯರ್‌ರವರಿಂದ ಪ್ರತಿ ಐದು ವರ್ಷಕ್ಕೊಮ್ಮೆ ಪ್ರಮಾಣ ಪತ್ರ ಪಡೆದುಕೊಳ್ಳತಕ್ಕದ್ದು. ಉಳಿದ ಇಂಜಿನಿಯರಿಂಗ್ ಇಲಾಖೆ/ವಿಭಾಗಗಳಿಂದ ಪಡೆಯುವ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ.

5. ಈಗಾಗಲೆ ನಿರ್ಮಾಣಗೊಂಡು ಅಸ್ತಿತ್ವದಲ್ಲಿರುವಂತಹ ಕಟ್ಟಡಗಳಿಗೆ ರಚನಾತ್ಮಕ (Structural evaluation) ಮೌಲ್ಯಮಾಪನ ಮಾಡಿಸಿ, National Building Code ಮಾನದಂಡಗಳನ್ವಯ ಕಾರ್ಯಪಾಲಕ ಇಂಜಿನಿಯರ್ ಲೋಕೋಪಯೋಗಿ ಇಲಾಖೆ ನಿರ್ಮಾಣ ಘಟಕರವರಿಂದ ಪ್ರಮಾಣ ಪತ್ರ ಪಡೆದುಕೊಳ್ಳತಕ್ಕದ್ದು ಹಾಗೆಯೇ ಪ್ರತಿ ಐದು ವರ್ಷಕ್ಕೊಮ್ಮೆ ನವೀಕರಿಸಿಕೊಳ್ಳತಕ್ಕದ್ದು.

6. ಲೋಕೋಪಯೋಗಿ ಇಲಾಖೆಯಿಂದ National Building Code ಪ್ರಮಾಣ ಪತ್ರ ನೀಡುವ ಕುರಿತಂತೆ ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆಗಳನ್ನು ಪಾಲಿಸುವುದು.

ಶಾಲಾ ಕಾಲೇಜುಗಳಿಗೆ ಪ್ರಮಾಣ ಪತ್ರಗಳನ್ನು ನೀಡುವ ವಿಷಯದಲ್ಲಿ ಅಗ್ನಿಶಾಮಕ ಇಲಾಖೆಯ ಅಧಿಕಾರಿಗಳು ಮತ್ತು ಲೋಕೋಪಯೋಗಿ ಇಲಾಖೆಯ ನಿರ್ಮಾಣ ಘಟಕದ ಅಧಿಕಾರಿಗಳು ಸಮನ್ವಯದೊಂದಿಗೆ ಕ್ರಮವಹಿಸುವುದು.

(ಎಸ್.ಆರ್.ಉಮಾಶಂಕರ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ.

ಇವರಿಗೆ:-

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ಇವರಿಗೆ ಕಳುಹಿಸುತ್ತಾ, ಸದರಿ ಸುತ್ತೋಲೆಯನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿ. 100 ಪ್ರತಿಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560 001 ಇವರಿಗೆ ಒದಗಿಸುವಂತೆ ಕೋರಲಾಗಿದೆ.

ಪ್ರತಿಗಳು:-

1. ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ಕೊಠಡಿ ಸಂಖ್ಯೆ:333, 3ನೇ ಮಹಡಿ, ವಿಕಾಸ ಸೌಧ, ಬೆಂಗಳೂರು.

2. ಪೊಲೀಸ್ ಮಹಾ ನಿರ್ದೇಶಕರು ಹಾಗೂ ಮಹಾ ನಿರ್ದೇಶಕರ ಕಛೇರಿ, ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು, ನಂ.1, ಅಣ್ಣಾಸ್ವಾಮಿ ಮೊದಲಿಯಾರ್ ವೃತ್ತ, ಬೆಂಗಳೂರು-560 042.
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
4. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ 18ನೇ ಕ್ರಾಸ್, ಬೆಂಗಳೂರು.
5. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಕಲಬುರಗಿ.
6. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.
7. ಮುಖ್ಯ ಅಭಿಯಂತರರು(ಗುಣ ಭರವಸೆ), ಲೋಕೋಪಯೋಗಿ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
8. ನಿರ್ದೇಶಕರು, ಪ್ರೌಢ ಶಿಕ್ಷಣ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
9. ನಿರ್ದೇಶಕರು, ಪ್ರಾಥಮಿಕ ಶಿಕ್ಷಣ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
10. ಅಧೀಕ್ಷಕ ಅಭಿಯಂತರರು (ವಿನ್ಯಾಸ), ಮುಖ್ಯ ಇಂಜಿನಿಯರ್‌ರವರ ಕಛೇರಿ (ದಕ್ಷಿಣ), ಬೆಂಗಳೂರು.
11. ಉಪ ನಿರ್ದೇಶಕರು (ಅಗ್ನಿ ನಿಯಂತ್ರಣ), ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು, ಬೆಂಗಳೂರು.
12. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ.
13. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ.
14. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ.
15. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಅನುಬಂಧ

# DEPUTY, DIRECTOR OF PUBLIC INSTRUCTION, BIDAR

## PRIVATE PRIMARY SCHOOL

| SL.NO | BLOCK | SCHOOLNAME & ADRESS |
|---|---|---|
| 1 | BASAVAKALYAN | EDEN PUBLIC SCHOOL SHAH HUSSAIN GALLI BASAVAKALYAN |
| 2 | BASAVAKALYAN | PHONIX HPS B-KALAYAN |
| 3 | BASAVAKALYAN | LUQMAN URDU HIGHER PRIMARY SCHOOL BASAVAKALYAN |
| 4 | BASAVAKALYAN | AL AMEEN URDU HIGHER PRIMARY SCHOOL KASAB GALLI BASAVA KALYAN |
| 5 | BASAVAKALYAN | IQRA LPS URDU BASAVAKALYAN |
| 6 | BASAVAKALYAN | AL-VAHEED URDU HPS SCHOOL |
| 7 | BASAVAKALYAN | VIDYA JOYTI HPS KANNADA |
| 8 | BASAVAKALYAN | VIDYA VIKAS PUBLIC SCHOOL HULSOOR ROAD BSAVAKALYAN DIST BIDAR |
| 9 | BASAVAKALYAN | VIDYA CHETANA LPS SCHOOL BUDHAVARPETE B KALYAN |
| 10 | BASAVAKALYAN | SIR SYED URDU PS B.KALYAN |
| 11 | BASAVAKALYAN | SHIRI SARADAGI .A.N.LPS B-KALAYAN |
| 12 | BASAVAKALYAN | LITTLE FLOWER PUBLIC SCHOOL B- |
| 13 | BASAVAKALYAN | VIVEKANANDA PUBLIC SCHOOL BASAVA KALYAN |
| 14 | BASAVAKALYAN | RAMA KRISHNA HPS B. KALYAN |
| 15 | BASAVAKALYAN | JAGADGURU SOMESHWAR SHIVACHARYA LPS SCHOOL TREEPURANT TQ B.KALYAN |
| 16 | BASAVAKALYAN | JULBEE TALENT PUBLIC SCHOOLTIRIPURANT |
| 17 | BASAVAKALYAN | EXLLENT LPS NGO COLONY B.KALYAN |
| 18 | BASAVAKALYAN | SARVODAYA HPS SCHOOLBETBALKUNDA |
| 19 | BASAVAKALYAN | NANDI BASAVESHWAR BETBALKUNDA |
| 20 | BASAVAKALYAN | B.M.THAMKE L.P.S ALGOOD |
| 21 | BASAVAKALYAN | DIAMOND PUBLIC SCHOOL HULSOOR |
| 22 | BASAVAKALYAN | SANSKAR HIGHER PRIMARY SCHOOL SOLDABKA |
| 23 | BASAVAKALYAN | VIDYA CHETAN HPS BATGERA |
| 24 | BASAVAKALYAN | SRI VENKATESH L.PS. MUDBI |
| 25 | BASAVAKALYAN | BHARATHI VIDYAMANDIR L.P.S KOUDIYAL |
| 26 | BASAVAKALYAN | BHAVANI HPS RAJESHWAR |
| 27 | BASAVAKALYAN | SARVAGNYA LPS SASTAPUR |
| 28 | BASAVAKALYAN | SAI SAMARATH LPS SASTAPUR |
| 29 | AURAD | SWAMY VIVEKANNAD HPS DHUPATMAHAGAON |
| 30 | AURAD | BHUVNESHWARI LPS KARNJI |
| 31 | AURAD | SWAMY VIVEKANNAD LPS TORNA |
| 32 | AURAD | ASHOK LPS KAMALNAGAR |
| 33 | AURAD | SARSAWATI LPS BELKUNI |
| 34 | AURAD | BHUVNESHWARI LPS JAMBGI |
| 35 | AURAD | VISHWA CHETAN LPS BALAT K |
| 36 | BHALKI | MARGA SATYA JEEVAN LPS LANJWAD |
| 37 | BHALKI | JNAYAN PS MADKATTI |
| 38 | BHALKI | VIVEKANANDA PS UCHA |
| 39 | BHALKI | SRI SAI PS SAIGAON |
| 40 | BHALKI | BASVODAYA LPS SIDDESHWAR |
| 41 | HUMNABAD | HKGN CHITGUPPA |
| 42 | HUMNABAD | GHATBORAL LPS GHATBORAL |
| 43 | HUMNABAD | JNYANODYA LPS MUSTARI |
| 44 | HUMNABAD | NARENDRA PS MANNAEKHELLI |
| 45 | HUMNABAD | GUNDAPPA MUTYA LPS KARAKNALLI |
| 46 | HUMNABAD | SAI GNYAN PS UDUBNALLI |
| 47 | HUMNABAD | SANGMESHWAR HPS HALLIKHED |
| 48 | HUMNABAD | ಹೆಚ್.ಕೆ.ಜಿ.ಎನ್. ಚಿಟಗುಪ್ಪಾ. |
| 49 | HUMNABAD | ಘಾಟಬೋರಾಳ ಎಲ್.ಪಿ.ಎಸ್. ಘಾಟಬೋರಾಳ. |
| 50 | HUMNABAD | ಜ್ಞಾನೋದಯ ಪ್ರಾಥಮಿಕ ಶಾಲೆ ಮುಸ್ತರಿ |
| 51 | HUMNABAD | ನರೇಂದ್ರ ಪ್ರಾಥಮಿಕ ಶಾಲೆ ಮನ್ನಾಏಖ್ಖೇಳಿ. |
| 52 | HUMNABAD | ಗುಂಡಪ್ಪಾ ಮುತ್ಯಾ ಪ್ರಾಥಮಿಕ ಶಾಲೆ ಕರಕನಳ್ಳಿ. |
| 53 | HUMNABAD | [illegible] |

Scanned by CamScanner

| SL.NO | BLOCK | SCHOOLNAME & ADRESS |
|---|---|---|
| 54 | HUMNABAD | ಸಂಗಮೇಶ್ವರ ಹಿರಿಯ ಪ್ರಾಥಮಿಕ ಶಾಲೆ ಹಳ್ಳಿಖೇಡ(ಕೆ). |
| 55 | HUMNABAD | ಅರುಣೋದಯ ಹಿರಿಯ ಪ್ರಾಥಮಿಕ ಶಾಲೆ ಚಿಟಗುಪ್ಪಾ |
| 56 | HUMNABAD | ಜಿ.ವಿಶ್ವಕರ್ಮ ಹಿರಿಯ ಪ್ರಾಥಮಿಕ ಶಾಲೆ ಸಂದಗಾಂವ. |
| 57 | HUMNABAD | ನ್ಯಾಷನಲ್ ಪಬ್ಲಿಕ್ ಶಾಲೆ ಘಾಟಬೋರಾಳ. |
| 58 | HUMNABAD | ಹಮೀದುಲ್ಲಾ ಪಬ್ಲಿಕ್ ಶಾಲೆ ಮಂಗಲಗಿ. |
| 59 | HUMNABAD | ನಂದಿನಿ ಹಿರಿಯ ಪ್ರಾಥಮಿಕ ಶಾಲೆ ಕಪ್ಪರಗಾಂವ |
| 60 | HUMNABAD | ನಂದಿನಿ ಹಿರಿಯ ಪ್ರಾಥಮಿಕ ಶಾಲೆ ಮಂಗಲಗಿ. |
| 61 | HUMNABAD | ಡಾ.ಎಸ್.ರಾಧಾಕೃಷ್ಣ ಹಿರಿಯ ಪ್ರಾಥಮಿಕ ಶಾಲೆ ಕನಕಟ್ಟಾ. |
| 62 | HUMNABAD | ಸ್ವಾಮಿ ವಿವೇಕಾನಂದ ಹಿರಿಯ ಪ್ರಾಥಮಿಕ ಶಾಲೆ ಕನಕಟ್ಟಾ |
| 63 | HUMNABAD | ಮದರ್ ಥೇರೆಸಾ ಹಿರಿಯ ಪ್ರಾಥಮಿಕ ಶಾಲೆ ಹಳ್ಳಿಖೇಡ(ಬಿ) |
| 64 | HUMNABAD | ವೀರಭದ್ರೇಶ್ವರ ಪ್ರಾಥಮಿಕ ಶಾಲೆ ಚಾಂಗಲೇರಾ |
| 65 | HUMNABAD | ರೇವಣಾರಾಧ್ಯ ಪ್ರಾಥಮಿಕ ಶಾಲೆ ಸಿಂಧನಕೇರಾ. |
| 66 | HUMNABAD | ಶ್ರೀ ಗುರು ಪ್ರಾಥಮಿಕ ಶಾಲೆ ಹುಮನಾಬಾದ. |
| 67 | HUMNABAD | ಪ್ರಗತಿ ಪ್ರಾಥಮಿಕ ಶಾಲೆ ತಾಳಮಡಗಿ. |
| 68 | HUMNABAD | ಸರ್.ಎಮ್.ವಿಶ್ವೇಶ್ವರಯ್ಯ |
| 69 | HUMNABAD | ಶ್ರೀ ಸಾಯಿ ಪ್ರಾಥಮಿಕ ಶಾಲೆ ಹುಮನಾಬಾದ. |
| 70 | HUMNABAD | ಶ್ರೀ ಸಾಯಿ ಪ್ರಾಥಮಿಕ ಶಾಲೆ ಸಿಂಧನಕೇರಾ. |
| 71 | HUMNABAD | ಬಿ.ಟಿ.ವಿ.ಪಿ. ಹಿರಿಯ ಪ್ರಾಥಮಿಕ ಮೀನಕೇರಾ. |
| 72 | HUMNABAD | ಗ್ಲೋಬಲ್ ಪಬ್ಲಿಕ್ ಶಾಲೆ ಚಿಟಗುಪ್ಪಾ |
| 73 | HUMNABAD | ನೂಲಿಚಂದಯ್ಯ ಹಿರಿಯ ಪ್ರಾಥಮಿಕ ಶಾಲೆ ಹುಮನಾಬಾದ. |
| 74 | HUMNABAD | ಎಮ್.ಜಿ.ಹಿರಿಯ ಪ್ರಾಥಮಿಕ ಶಾಲೆ ಉಡಮನಳ್ಳಿ. |
| 75 | HUMNABAD | ವೀರಾಂಜನೇಯ ಪ್ರಾಥಮಿಕ ಶಾಲೆ ಸಿಂಧನಕೇರಾ |
| 76 | HUMNABAD | ಜ್ಞಾನದೀಪ ಹಿರಿಯ ಪ್ರಾಥಮಿಕ ಶಾಲೆ ನಿರ್ಣಾ. |
| 77 | HUMNABAD | ವಿಶಾಲ ಪ್ರಾಥಮಿಕ ಶಾಲೆ ಸೇಡೋಳ. |
| 78 | HUMNABAD | ಎಮ್.ಜಿ.ಹಿರಿಯ ಪ್ರಾಥಮಿಕ ಶಾಲೆ ಬನ್ನಳ್ಳಿ. |
| 79 | HUMNABAD | ಪ್ರೀಯಾ ಪಬ್ಲಿಕ್ ಶಾಲೆ ಮನ್ನಾಏಖ್ಖೇಳ್ಳಿ. |
| 80 | HUMNABAD | ಮಹಾರಾಣಾ ಪ್ರತಾಪ ಹಿರಿಯ ಪ್ರಾಥಮಿಕ ಶಾಲೆ ಘಾಟಬೋರಾಳ. |
| 81 | HUMNABAD | ಡಾ.ರಾಧಾಕೃಷ್ಣನ್ ಹುಡಗಿ. |
| 82 | HUMNABAD | ಸಿದ್ಧಾರೂಢ ಹಿರಿಯ ಪ್ರಾಥಮಿಕ ಶಾಲೆ ಧೂಮ್ಮನಸೂರ. |
| 83 | HUMNABAD | ಶ್ಯಾಮಸುಂದರ ಹಿರಿಯ ಪ್ರಾಥಮಿಕ ಶಾಲೆ ಮನ್ನಾಏಖ್ಖೇಳ್ಳಿ. |
| 84 | HUMNABAD | ಜೈ ಪ್ರಕಾಶ ನಾರಾಯಣ ಹಿರಿಯ ಪ್ರಾಥಮಿಕ ಶಾಲೆ ಹಳ್ಳಿಖೇಡ(ಬಿ). |
| 85 | BIDAR | ಸಿಸ್ವಾ ಪಬ್ಲಿಕ್ ಪ್ರಾಥಮಿಕ ಶಾಲೆ ಮರಕುಂದಾ |
| 86 | BIDAR | ನೈಟಿಂಗೇಲ ಪಬ್ಲಿ ಶಾಲೆ ಮರಕುಂದಾ |
| 87 | BIDAR | ನೈಟಿಂಗೇಲ ಪಬ್ಲಿ ಶಾಲೆ ಸಿಂದೋಲ |
| 88 | BIDAR | ನೈಟಿಂಗೇಲ ಪಬ್ಲಿ ಶಾಲೆ ಭಂಗೂರ |
| 89 | BIDAR | ಓಯಸಿಸ್ ಪಬ್ಲಿಕ ಸ್ಕೂಲ್ ಮುಲ್ತಾನಿ ಕಾಲೋನಿ ಬೀದರ |
| 90 | BIDAR | ಜಾಯ್ ಕೀಡ್ಸ ಕೇರ್ ಪ್ರಾಥಮಿಕ ಶಾಲೆ ನಂದಿ ಪೆಟ್ರೋಲ್ ಪಂಪ ಹತ್ತಿರ ಬೀದರ |
| 91 | BIDAR | ಮದರ ತರೆಸಾ ಕಿರಿಯ ಪ್ರಾಥಮಿಕ ಶಾಲೆ ಗಾದಗಿ |
| 92 | BIDAR | ಇನ್ಫಂಟ್ ಜಿಜಸ್ ಪಬ್ಲಿಕ್ ಶಾಲೆ ಯಾಕತಪೂರ |
| 93 | BIDAR | ಚಾಲುಕ್ಯಯ ಹಿರಿಯ ಪ್ರಾ.ಶಾಲೆ ಮರಕುಂದಾ |
| 94 | BIDAR | ಗುಲಶನ್ ಎ ಅತ್ತಫಾಲ್ ಉರ್ದು ಹಿರಿಯ ಪ್ರಾಥಮಿ ಶಾಲೆ ಬೀದರ |
| 95 | BIDAR | ರವಿ ಜ್ಞಾನಿ ಬಲ್ಲೂರ ಹಿರಿಯ ಪ್ರಾಥಮಿಕ ಶಾಲೆ ಬೀದರ |
| 96 | BIDAR | ಶ್ರೀ ಶಂಭುಲಿಂಗೇಶ್ವರ ಹಿರಿಯ ಪ್ರಾಥಮಿಕ ಶಾಲೆ ಸಿಂದೋಲ |
| 97 | BIDAR | ಜಾಯ್ ಪಬ್ಲಿಕ್ ಸ್ಕೂಲ ಗುಂಪ ರೊಡ ಬೀದರ |
| 98 | BIDAR | ಸ್ವಾಮಿ ವಿವೇಕಾನಂದ ಪ್ರಾಥಮಿಕ ಶಾಲೆ ಕಮಠಾಣಾ |
| 99 | BIDAR | ಬ್ಲಾಸಮ್ ಪಬ್ಲಿಕ್ ಸ್ಕುಲ ಕಮಠಾಣಾ |
| 100 | BIDAR | ಶ್ರೀ ಶರಣವೀರಭದ್ರಪ್ಪ ಗುರುಕುಲ ಹಿರಿಯ ಪ್ರಾಥಮಿಕ ಶಾಲೆ ಅಲಿಯಂಬರ್ |
| 101 | BIDAR | ಮದರ ತೆರೆಸಾ ಪಬ್ಲಿಕ್ ಸ್ಕೂಲ್ ಗಾದಗಿ |
| 102 | BIDAR | ವಿದ್ಯಾಕಿರಣ ಹಿರಿಯ ಪ್ರಾಥಮಿಕ ಶಾಲೆ ಜನವಾಡ |
| 103 | BIDAR | ನ್ಯೂ ಅಪೋಸ್ಟೋಲಿಕ್ಹಿ.ಪ್ರಾ.ಶಾಲೆ ಬೀದರ್ |
| 104 | BIDAR | ರೇಡಿಯನ್ ಪ್ರಾಥಮಿಕ ಶಾಲೆ ಬಹುಮನಿ ರಸ್ತೆ ಬೀಧರ |
| 105 | BIDAR | ಇಂಪೀರಿಯಲ್ ಪಬ್ಲಿಕ್ ಸ್ಕೂಲ್ ಬೀದರ |

ಉಪ ನಿರ್ದೇಶಕರು (ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ

Scanned by CamScanner

# DEPUTY, DIRECTOR OF PUBLIC INSTRUCTION, BIDAR

## PRIVATE HIGH SCHOOL

| SL_NO | BLOCK | SCHOOLNAME & ADRESS |
|---|---|---|
| 1 | BASAVAKALYAN | AL- VAKEEL HS B KALYAN |
| 2 | BASAVAKALYAN | SRI GURUSIDDARAJ H.S B.KALLYAN |
| 3 | BASAVAKALYAN | MOHAMMADI URDU GIRLS HS |
| 4 | BASAVAKALYAN | PRESIDENCY URDU PUBLIC SCHOOL |
| 5 | BASAVAKALYAN | TIPU SULTAN HIGH SCHOOL ENG BASAVA KALYAN |
| 6 | BASAVAKALYAN | SRI MURUL SIDESHWAR H.S. MUDBI |
| 7 | HUMNABAD | ಪ್ರೀಯಾ ಪ್ರೌಢ ಶಾಲೆ ಮನ್ನಾಏಖ್ಖೇಳ್ಳಿ. |
| 8 | HUMNABAD | ಪ್ರಶಾಂತ ಪ್ರೀಯಾ ಪ್ರೌಢ ಶಾಲೆ ಮನ್ನಾಏಖ್ಖೇಳ್ಳಿ. |
| 9 | HUMNABAD | ವೆಂಕಟೇಶ್ವರ ಪ್ರೌಢ ಶಾಲೆ ನಿರ್ಣಾ. |
| 10 | HUMNABAD | ಜ್ಞಾನದೀಪ ಪ್ರೌಢ ಶಾಲೆ ನಿರ್ಣಾ. |
| 11 | HUMNABAD | ಜ್ಞಾನೋದಯ ಪ್ರೌಢ ಶಾಲೆ ಹಳ್ಳಿಖೇಡ(ಕೆ). |
| 12 | HUMNABAD | ವಿವೇಕಾನಂದ ಪ್ರೌಢ ಶಾಲೆ ನಿರ್ಣಾ. |
| 13 | HUMNABAD | ಜ್ಞಾನಭಾರತಿ ಪ್ರೌಢ ಶಾಲೆ ಹಳ್ಳಿಖೇಡ(ಬಿ) |
| 14 | HUMNABAD | ಸರಸ್ವತಿ ಪ್ರೌಢ ಶಾಲೆ ಹಳ್ಳಿಖೇಡ(ಬಿ) |
| 15 | HUMNABAD | ಜ್ಞಾನದರ್ಶನ ಪ್ರೌಢ ಶಾಲೆ ಚಿಟಗುಪ್ಪಾ. |
| 16 | HUMNABAD | ಛತ್ರಪತಿ ಶಾಹೂ ಮಹಾರಾಜ ಪ್ರೌಢ ಶಾಲೆ ಘಾಟಬೋರಾಳ. |
| 17 | BIDAR | ಶ್ರೀ ಜೈಪ್ರಕಾಶ ಪ್ರೌಢ ಶಾಲೆ ಮರಕುಂದಾ |
| 18 | BIDAR | ಎನ್,ಟಿ,.ಸಿ ಅಲ್ ಮೆಹಬೂಬ ಉರ್ದು ಮತ್ತು ಕನ್ನಡ ಪ್ರೌಢ ಶಾಲೆ ಬೀಧರ |
| 19 | BIDAR | ಡಾ.ಬಿ.ಆರ್. ಅಂಬೇಡ್ಕರ್ ಹಿರಿಯ ಪ್ರಾಥಮಿಕ ಶಾಲೆ ಮನ್ನಳ್ಳಿ |
| 20 | BIDAR | ಭಾಸ್ಕರ ಮತ್ತು ಜ್ಞಾನಿ ಬಲ್ಲೂರ ಪ್ರೌಢ ಶಾಲೆ ಬೀದರ |
| 21 | BIDAR | ಘಾಳೇಪ್ಪ ಕೋಟೆ ಪ್ರೌಢ ಶಾಲ ನಿಜಾಮಪೂರ |
| 22 | BIDAR | ಅರುಣೋದಯ ಪ್ರೌಢ ಶಾಲೆ ಬೀದರ |

ಉಪ ನಿರ್ದೇಶಕರು (ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ ಬೀದ[illegible]